ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ 1274/ 2024
ಚಾ. ಸಾ 15
ಪ್ರಾ.ಸಾ 10

| | | |
|---|---|---|
| ಸಾಕ್ಷಿದಾರರ ಹೆಸರು | : | ಶಾಂತರಾಮ್ |
| ತಂದೆಯ ಹೆಸರು | : | ಶ್ರೀನಿವಾಸ್ |
| ವಯಸ್ಸು | : | 55 |
| ಉದ್ಯೋಗ | : | ರೋಬೋ ಸ್ವಾಪ್ಟ್ ವೇರ್ ಕಂಪೆನಿಯಲ್ಲಿ ಉದ್ಯೋಗಿ |
| ವಾಸಸ್ಥಳ | : | ಕಲ್ಯಾಣಪುರ |

ದಿನಾಂಕಃ 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ2 ಮತ್ತು 3 ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ2(ಬಿ) ಮತ್ತು ನಿಪಿ3(ಬಿ) ಎಂದು ಗುರುತಿಸಲಾಯಿತು . ಫೋಟೋ ಗಳನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅವುಗಳನ್ನು ಈಗಾಗಲೇ ನಿಪಿ 4 ರಿಂದ 6 ಎಂದು ಗುರುತಿಸಲಾಗಿದೆ . ದಿ 03-10-2021 ರಂದು ಪೊಲೀಸರು ಸ್ಥಳ ಮಹಜರು ಕಾಲಕ್ಕೆ ನನ್ನನ್ನು ಹಾಗೂ ಚಾಸಾ 14 ರವರನ್ನು ಸ್ಥಳಕ್ಕೆ ಕರೆಯಿಸಿದ್ದರು, ಸ್ಥಳದಲ್ಲಿ ಹಾಜರಿದ್ದ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಸ್ಥಳ ಮಹಜರು ಜರುಗಿಸಿರುತ್ತಾರೆ. ಮಹಜರನ್ನು ಮದ್ಯಾಹ್ನ 11.00 ರಿಂದ 12.00 ಗಂಟೆ ವರೆಗೆ ಬರೆದಿರುತ್ತಾರೆ. ಮಹಜರು ಸಮಯದಲ್ಲಿ ಕರಾಡು ನಕಾಶೆಯನ್ನು ಪೊಲೀಸರು ತಯಾರಿಸಿರುತ್ತಾರೆ . ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ . ಅದೇ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ . ಅವುಗಳನ್ನು ಈಗಾಗಲೇ ನಿಪಿ 4 ರಿಂದ 6 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನಗೆ ಸ್ಥಳ ಮಹಜರಿಗೆ ಬರುವಂತೆ ಪೊಲೀಸರು ನೋಟಿಸು ಕೊಟ್ಟಿಲ್ಲ ಎಂದರೆ ಸರಿ . ಈ ಘಟನೆಗೆ ಸಂಬಂಧಪಟ್ಟಂತೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೆ . ಪೊಲೀಸ್ ಠಾಣೆಗೆ ಹೋದ ಸಂದರ್ಭದಲ್ಲಿ ಎಷ್ಟು ಸಹಿ ಮಾಡಿದ್ದೆ ಎಂದು ನೆನಪಿಲ್ಲ . ನಾನು ಪೊಲೀಸ್ ಠಾಣೆ ಯಲ್ಲಿ ಸಮಾರು 3 ರಿಂದ 4 ಸಹಿ ಮಾಡಿರಬಹುದು . ನಾನು

ಪೊಲೀಸ್ ಠಾಣೆಗೇ ಹೋಗುವ ಮೊದಲು ಪೊಲೀಸರು ಮೊದಲೇ ದಾಖಲೆಯನ್ನು ತಯಾರು ಮಾಡಿ ಇಟ್ಟಿದಾರೋ ಇಲ್ಲವೋ ಗೊತಿಲ್ಲ . ನನ್ನ ಜೊತೆ ಪೊಲೀಸ್ ಠಾಣೆಗೆ ಸದಾಶಿವ್ ಬಂದಿರಲಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ ದಾಖಲೆಯನ್ನು ಏನೆನೂ ಬರೆಯಲಾಯಿತು ಎಂದು ನನಗೆ ಗೊತ್ತಿಲ್ಲ . ಸ್ಥಳ ದಲ್ಲಿ ಕಲ್ಲುಕಂಭ ಮತ್ತು ಸರಿಗೆ ಎಲ್ಲಾ ಇತ್ತು . ನಿಪಿ 4 ರಿಂದ 6 ಭಾವಚಿತ್ರದಲ್ಲಿ ಕಲ್ಲುಕಂಭ ಕಾಣುತ್ತಿಲ್ಲ. ನನ್ನ ಜೊತೆ ಮಹಜರಿಗಳಿಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ . ವಿವಾದಿತ ರಸ್ತೆ ಎಷ್ಟು ಮೀಟರ್ ರಸ್ತೆ ಎಂದು ನಮೂದು ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ . ಪೊಲೀಸರು ಮಹಜರಿನಲ್ಲಿ ವಿವಾದಿತ ಸ್ಥಳದ ಸರ್ವೇ ನಂಬರ್ ಮತ್ತು ಸೆಂಟ್ಸ್ ನ್ನು ಉಲ್ಲೇಖ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಎಷ್ಟು ಉದ್ದದ ಕಾಮಗಾರಿ ಆಗಿತ್ತು ಎಂಬ ಬಗ್ಗೆ ಪೊಲೀಸರು ಮಹಜರಿನಲ್ಲಿ ಉಲ್ಲೇ ಖ ಮಾಡಿರುತ್ತಾರೆ . ನಾನು ಸ್ಥಳ ದಲ್ಲಿ ನೋಡಿದ ಪ್ರಕಾರ ಹೇಳುತಿದ್ದೇನೆ ಆದರೇ ಮಹಜರಿನಲ್ಲಿ ಅದನ್ನು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ . ಜಯಲಕ್ಷ್ಮೀ ಮತ್ತು ತೋಮಸ್ ರವರ ಮನೆ ಎದುರುಬದರು ಇರುತ್ತದೆ ಎಂದರೆ ಸರಿ . ಜಯಲಕ್ಷ್ಮೀ ಮತ್ತು ತೋಮಸ್ ಮನೆಯ ಗೇಟು ಎದುರುಬದರು ಇರುತ್ತದೆ . ನಿಪಿ 3 ನಕ್ಷೆಯನ್ನುಯಾರು ತಯಾರಿಸಿದ್ದಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ . ನಿಪಿ 4 ರಿಂದ 6 ಭಾವಚಿತ್ರವನ್ನು ಯಾವಾಗ ಎಲ್ಲಿ ತೆಗೆದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಪೊಲೀಸರು ತೆಗೆದಿರಬಹುದು ಎಂದು ತಿಳಿಸಿರುತ್ತಾರೆ . ಪೊಲೀಸರು ಸ್ಥಳ ದಲ್ಲಿ ಸುಮಾರು 1 ಗಂಟೆಗಳ ಕಾಲ ಇದ್ದರು . ಪೊಲೀಸರು ಘಟನಾ ಸ್ಥಳಕ್ಕೆ ಬಂದಿಲ್ಲ ಮತ್ತು ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಕ್ಷೀರು ಸ್ಥಳಕ್ಕೂ ಮಹಜರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.